3

# ಹಳೇ ಒಡಂಬಡಿಕೆಯ ಸ್ತ್ರೀಯರು

ಸೃಷ್ಟಿಯ ಸಮಯದಿಂದಲೂ, ಆದಿ ಸಭೆಯವರಿಗೆ, ದೇವರ ಯೋಜನೆಯಲ್ಲಿರುವ ಸ್ತ್ರೀಯರ ಪಾತ್ರವನ್ನು, ದೇವರ ವಾಕ್ಯವು ವಿವರಿಸಿ ದೃಷ್ಟೀಕರಿಸುತ್ತದೆ. ಕುಟುಂಬದಲ್ಲಿಯೂ ಸಮುದಾಯದಲ್ಲಿಯೂ, ಅವರ ಜನಾಂಗದ ಮಧ್ಯದಲ್ಲಿಯೂ, ಮತ್ತು ಒಳ್ಳೆದರ ಹಾಗೂ ಕೆಟ್ಟದರ ವಿಷಯದಲ್ಲಿಯೂ ಸ್ತ್ರೀಯರು ತೋರಿದ ಪ್ರಭಾವದ ಕುರಿತಾಗಿ ದೇವರ ವಾಕ್ಯದಲ್ಲಿ ಉದಾಹರಣೆಗಳನ್ನು ನೀಡಲಾಗಿದೆ.

## ಏದೇನ್ ತೋಟದಲ್ಲಿ ಇದ್ದ ಸ್ತ್ರೀ

ಏದೇನ್ ತೋಟದಲ್ಲಿ ಸಂಭವಿಸಿದ ಆದಾಮನ ಪಾಪದ ಸುತ್ತಲೂ ಗೋಚರಿಸುವ ಕಾರ್ಯಗಳಲ್ಲಿ ತನ್ನ ಸೃಷ್ಟಿಯ ಮೇಲೆ ನಾಯಕತ್ವದ ಪಾತ್ರವನ್ನು ಬಯಸಿದನು ಎಂದು ನೋಡುತ್ತೇವೆ.

### ಸೈತಾನನಿಂದ ಉಂಟಾದ ಶೋಧನೆ

ದೇವರು ಪುರುಷನೊಂದಿಗೆ ನೇರವಾಗಿ ಮಾತನಾಡಿ, "ಇದಲ್ಲದೆ ಕರ್ತನಾದ ದೇವರು ಆ ಮನುಷ್ಯನಿಗೆ - ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛೆ ವಾಗಿ ತಿನ್ನಬಹುದು; ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು" (ಆದಿಕಾಂಡ 2:16, 17). ಈ ಕುರಿತಾಗಿ ದೇವರು ತಡವಾಗಿಯಾದರೂ ಅವ್ವಳೊಂದಿಗೆ ಮಾತನಾಡಿರಬಹುದು, ಅಥವಾ ದೇವರು ಅವ್ವಳನ್ನು ಆದಾಮನ ಬಳಿಗೆ ಕರೆತಂದಾಗ, ಬಹುಶಃ ಆದಾಮನು ಈ ಸಂದೇಶ ವನ್ನು ಅವ್ವಳಿಗೆ ತಿಳಿಸಿರಬಹುದು. ಒಳ್ಳೇದರ ಕೆಟ್ಟದರ ಅರುಹನ್ನು ಹುಟ್ಟಿಸುವ ಹಣ್ಣನ್ನು ತಿನ್ನಬಾರದು ಎಂಬ ವಿಷಯವು ಅವ್ವಳಿಗೆ ತಿಳಿದಿತ್ತು. ಆದ್ದರಿಂದ ಆಕೆಯು ತೋಟದಲ್ಲಿರುವ ಮರಗಳ ಹಣ್ಣುಗಳನ್ನು ನಾವು ತಿನ್ನಬಹುದು. "... 'ಆದರೆ ತೋಟದ ಮಧ್ಯದಲ್ಲಿರುವ ಈ ಮರದ ಫಲದ ವಿಷಯವಾಗಿ "ಇದನ್ನು ತಿನ್ನಲೂ ಕೂಡದು, ಮುಟ್ಟಲೂ ಕೂಡದು; ತಿಂದರೆ ಸಾಯುವಿರಿ ಎಂದು ದೇವರು ಹೇಳಿದ್ದಾನೆ ಅಂದಳು" ' " (ಆದಿಕಾಂಡ 3:2, 3).

ಆದಿಕಾಂಡದಲ್ಲಿ ದೇವರು ದಯಪಾಲಿಸಿರುವ ಮಾಹಿತಿಯ ಪ್ರಕಾರ, ಅವಳನ್ನು ಪಾಪಕ್ಕೆ ಶೋಧಿಸಿದ ಹಣ್ಣಿನ ವಿಷಯವಾಗಿ, ಹವ್ವಳ ತಿಳುವಳಿಕೆ ಏನಾಗಿತ್ತು ಎಂದು ಅರಿಯಬಹುದು. (1) "ಆ ಮರದ ಹಣ್ಣು ತಿನ್ನುವದಕ್ಕೆ ಉತ್ತಮವಾಗಿತ್ತು," (2) "ನೋಡುವದಕ್ಕೆ ರಮ್ಯವಾ ಗಿತ್ತು," (3) ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇತ್ತು (ಆದಿಕಾಂಡ 3:6). "ತಿಂದರೆ ದೇವರಂತೆ ಆಗಿ ಒಳ್ಳೆದರ, ಕೆಟ್ಟದರ ಬೇದವನ್ನು ಅರಿಯುವಿರಿ" ಎಂಬ ವ್ಯಾಖ್ಯಾನ ಸೈತಾನನದಾಗಿತ್ತು (ಆದಿಕಾಂಡ 3:5ಬಿ). ಅವರು ಅದನ್ನು ತಿಂದ ನಂತರ, ದೇವರು, "ಇಗೋ ಮನುಷ್ಯನು ಒಳ್ಳೆದರ ಕೆಟ್ಟದರ ಬೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲ" ಅಂದನು (ಆದಿಕಾಂಡ 3:22ಎ). ಇಲ್ಲಿಯವರೆಗಿನ ಪಾಠದ ಒಂದು ತಾತ್ಪರ್ಯವೇನೆಂದರೆ: ಅವರು ಹಣ್ಣನ್ನು ತಿನ್ನುವದಕ್ಕಿಂತ ಮೊದಲು, ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ತಿಳಿದಿರಲಿಲ್ಲ. ಮತ್ತು ನೀತಿಧರ್ಮದ ಬಗ್ಗೆ ಮುಗ್ದರಾಗಿದ್ದರು, ಮತ್ತು ಈ ವಿಷಯದಲ್ಲಿ ಅವರು ಶೋಧನೆಗೆ ಒಳಗಾಗಲು ಅಸಾಧ್ಯವಾಗಿತ್ತು, ಆದರೆ ಅವರು ಆ ಹಣ್ಣನ್ನು ತಿಂದ ನಂತರ, ಒಳ್ಳೇದರ

ಕೆಟ್ಟದ್ದರ ಅರಿವಿನ ಬಗ್ಗೆ ಮುಗ್ಧರಾಗಿರಲಿಲ್ಲ. ಅವರ ಮುಗ್ಧತೆಯ ಮನಸ್ಸು ಹೊರಟು ಹೋಗಿತ್ತು. ನೀತಿ ಧರ್ಮದ ವಿಷಯದಲ್ಲಿ ಮನಸ್ಸಾಕ್ಷಿ ಇಲ್ಲದವರಾಗಿದ್ದ ಇವರು ದೇವರು ಹೊಂದಿದ್ದ, ನೀತಿ ಧರ್ಮದ ಜ್ಞಾನಕ್ಕೆ ಸೇರಲ್ಪಟ್ಟರು.

ಒಳ್ಳೆದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು, ಅದಾಮ ಮತ್ತು ಹವ್ವಳು ತಿಂದದ್ದರಿಂದ, ಅವರು ತಮ್ಮ ಸ್ವಭಾವವನ್ನು ಕೆಡಿಸಿಕೊಂಡರು ಎಂಬ ತೀರ್ಮಾನಮಾಡಬಾರದು. ಅವರು ಜ್ಞಾನವನ್ನು ಮಾತ್ರ ಪಡೆಯದೆ, ಅವರು ಒಳ್ಳೆದರ ಅರುಹನ್ನು ಸಹ ಪಡಕೊಂಡರು. ಕೆಟ್ಟದ್ದರ ಅರಿವು ಅವರನ್ನು ಕೆಟ್ಟ ಕಾರ್ಯಕ್ಕೆ ನಡೆಸುವುದಾದರೆ, ಒಳ್ಳೇದರ ಅರಿವು ಅವರನ್ನು ಯಾಕೆ ಒಳ್ಳೆಯತನಕ್ಕೆ ನಡೆಸಬಾರದು? ತಿನ್ನಬಾರದು ಎಂದು ಹೇಳಲ್ಪಟ್ಟ ಹಣ್ಣನ್ನು ಅವರು ತಿಂದದ್ದರಿಂದ ಅವರ ಸ್ವಭಾವವು ಕೆಡಲಿಲ್ಲ; ಅವರು ತೋರಿದ ಅವಿಧೇಯತೆಯ ಕ್ರಿಯೆಯು, ದೇವರು ಹೊಂದಿರುವ ನೀತಿ ಧರ್ಮದ ಗ್ರಹಿಕೆಯನ್ನು ತಿಳಿಯುವಂತೆ ಮಾಡಿತು. ಅವರು ತಿನ್ನುವದಕ್ಕಿಂತ ಮೊದಲು, ಒಳ್ಳೇದರ ಕೆಟ್ಟದ್ದರ ಅರಿವನ್ನು ಹೊಂದಿರಲಿಲ್ಲ. ಮತ್ತು ಚಿಕ್ಕ ಮಕ್ಕಳಿಗೆ ಇರುವಂಥ ಮುಗ್ಧತೆಯು ಅವರಲಿತ್ತು (ಧರ್ಮೋಪದೇಶಕಾಂಡ 1:39; ಯೆಶಾಯ 7:16). ದೇವರು ಕೆಟ್ಟದ್ದರ ಹಾಗೂ ಒಳ್ಳೆದ್ದರ ಅರಿವನ್ನು ನಿರ್ವಹಿಸುವಂತೆ; ಮನುಷ್ಯನು ನಿರ್ವಹಿಸಲಾರನು. ಈ ಕಾರಣದಿಂದ ಆದಾಮ ಮತ್ತು ಹವ್ವಳು ಆ ಹಣ್ಣನ್ನು ತಿನ್ನಬಾರದು ಎಂದು ಅಪ್ಪಣೆಮಾಡಿದನು: ಅವರು ಒಳ್ಳೇದನ್ನಾಗಲಿ ಕೆಟ್ಟದ್ದನ್ನಾಗಲಿ ಆರಿಸಿಕೊಳ್ಳಲು, ಅವರಿಗೆ ಕಷ್ಟವಾಗುತ್ತದೆ ಎಂದು ದೇವರಿಗೆ ತಿಳಿದಿತ್ತು. ಅವರು ನೈತಿಕ ಹಾಗೂ ಆತ್ಮೀಕ ನಿಯಮಗಳಿಗೆ ವಿರೋಧವಾಗಿ ಏಳುವರು ಎಂದು ತಿಳಿದ, ದೇವರು ಅವರಿಗೆ ಹಣ್ಣನ್ನು ತಿನ್ನಬಾರದೆಂದು ಕಟ್ಟಪ್ಪಣೆ ಮಾಡಿದ್ದನು.

**ದೇವರ ಶಿಕ್ಷೆ**

ಆದಿಕಾಂಡ 3:9, 11ರ ಪ್ರಕಾರ, ದೇವರು ಮೊದಲು ಆದಾಮನ ಸಂಗಡ ಮಾತನಾಡಿ, ದೇವರ ಚಿತ್ತದ ಉಲ್ಲಂಘನೆಯ ಕುರಿತಾಗಿ ಪ್ರಶ್ನಿಸಿದನು. ಆದಾಮನು ಈಗಾಗಲೇ ಹವ್ವಳ ಗಂಡನಾಗಿ ನಾಯಕತ್ವವನ್ನು ವಹಿಸಿದ್ದನು ಎಂದು ಈ ಕಾರ್ಯವು ಸೂಚಿಸುತ್ತದೆ. ಹವ್ವಳಿಗಿಂತಲೂ, ಆದಾಮನು ಹೆಚ್ಚಿನ ಜವಾಬ್ದಾರಿಯನ್ನು ಹೊಂದಿದ್ದನು. ಎಂದು ತಿಳಿಸುತ್ತದೆ, "ಈ ವಿಷಯ ಹೇಗಂದರೆ ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು" (ರೋಮಾಪುರ 5:12); "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲಾರೂ ಜೀವಿತರಾಗುವರು" (1 ಕೊರಿಂಥ 15:22). ಹೇಗೂ ಆದಾಮನ ಪಾಪದ ಸಂಬಂಧವು ಮತ್ತು ಹವ್ವಳ ಕುರಿತಾದ ಪಾಪವು - ವ್ಯತ್ಯಾಸವಾಗಿತ್ತು, 1 ತಿಮೊಥೆ 2:14 ಹೇಳುತ್ತದೆ, "ಇದಲ್ಲದೆ ಆದಾಮನು ವಂಚನೆಗೆ ಒಳಬೀಳಲಿಲ್ಲ. ಸ್ತ್ರೀಯು ವಂಚನೆಗೆ ಒಳಬಿದ್ದು ಅಪರಾಧಿಯಾದಳು."

ಅವರು ಅಪರಾದ ಮಾಡುವದಕ್ಕಿಂತ ಮೊದಲು ಇಲ್ಲದೆ ಇದ್ದಂತ ಪರಿಸ್ಥಿತಿಯ ಮೇರೆಗೆ ಅವರಿಗೆ ಶಿಕ್ಷೆ ನೀಡಲಾಯಿತು. (1) ಅಪರಾದ ಮಾಡುವದಕ್ಕಿಂತ ಮೊದಲು, ಸರ್ಪವು ಹೊಟ್ಟೆಯಿಂದ ಹರಿದಾಡುತ್ತಿರಲಿಲ್ಲ; ಆನಂತರ ಅವನು ಎಲ್ಲಾ ಪ್ರಾಣಿಗಳಿಗಿಂತಲೂ ಹೆಚ್ಚಾಗಿ ಶಪಿಸಲ್ಪಟ್ಟನು, ಮತ್ತು ಹೊಟ್ಟೆಯಿಂದ ಹರಿದಾಡುತ್ತಾ ಜೀವನ ಪೂರ್ತಿ ಮಣ್ಣನ್ನೇ ತಿನ್ನಬೇಕೆಂದು ಶಪಿಸಲ್ಪಟ್ಟನು. (2ಃ) ಸ್ತ್ರೀಯು ಹೆರುವಾಗ ತೀವ್ರವಾದ ನೋವನ್ನು ಅನುಭವಿಸುವಂತೆ ಮಾಡಿ, ಪುರುಷನು ಅವಳ ಮೇಲೆ ಅಧಿಕಾರ ಮಾಡುವನು ಅಂದನು. ಈ ಮೊದಲು, ವೇದನೆಯಿಲ್ಲದೆ ಪ್ರಸವವು ಆಗುವದಕ್ಕೆ ಸಾಧ್ಯವಿತ್ತು. ಒಂದು ವೇಳೆ ಪುರುಷನು ಈಗಾಗಲೇ ಅವಳ ಮೇಲೆ ದೊರೆತನ ಮಾಡಿದ್ದರೆ, ಇದು ದೇವರು - ಅವಳಿಗೆ ನೀಡಿದ ಪಾಪದ ಶಿಕ್ಷೆಯಾಗುತ್ತಿರಲಿಲ್ಲ. (3) ಮನುಷ್ಯನ ದೆಸೆಯಿಂದ ಭೂಮಿಗೆ ಶಾಪಬಂತು (ಆದಿಕಾಂಡ 3:17-19). ನಂತರ

ಅವನು ಮಣ್ಣಿನಿಂದ ಬಂದವನಾದ್ದರಿಂದ ಮಣ್ಣಿಗೆ ಸೇರುವನು. ಈ ಅಪರಾಧದ ಶಿಕ್ಷೆಯು, ಅವರು ಪಾಪ ಮಾಡುವದಕ್ಕಿಂತ ಮೊದಲೇ ಉದ್ಭವಿಸಿರಲಿಲ್ಲ.

ಆದಿಯಿಂದಲೇ ಪುರುಷನು ನಾಯಕತ್ವದ ಪಾತ್ರವನ್ನು ವಹಿಸಬೇಕೆಂದು ನಿರ್ಣಯಿಸಿದ್ದನು, ಆದರೆ ಅವರು ಒಳ್ಳೆದರ ಕೆಟ್ಟದ್ದರ ಅರುಹನ್ನು ಉಂಟುಮಾಡುವ ಹಣ್ಣನ್ನು ತಿಂದ ನಂತರ, ಈ ನಾಯಕತ್ವ ಕುರಿತಾಗಿ ದೇವರು ಬಹಿರಂಗ ಹೇಳಿಕೆಯನ್ನು ನೀಡಿದನು (ಆದಿಕಾಂಡ 3:16). "ದೊರೆತನ" ಅಂದರೆ ಇಬ್ರಿಯ ಭಾಷೆಯಲ್ಲಿ ಇದನ್ನು *ಮಾಶಲ್*, ಅದು "ದೊರೆತನ"ವೆಂದು ತರ್ಜುಮೆಗೊಂಡಿದೆ (ಆದಿಕಾಂಡ 37:8; ಧರ್ಮೋಪದೇಶಕಾಂಡ 15:6) ಅಥವಾ "ಅಧಿಕಾರ" (ವಿಮೋಚನಕಾಂಡ 21:8). ಪ್ರಪಂಚದ ಇತಿಹಾಸದ ಉದ್ದಕ್ಕೂ ಪುರುಷರು ನಾಯಕತ್ವದ ಪಾತ್ರವನ್ನು ಹೊಂದಿದ್ದರು. ಅನೇಕ ಮಾನವೀಯ ಸಂಸ್ಕೃತಿಯಲ್ಲಿ, ಸ್ತ್ರೀಯರಿಗಿಂತಲೂ ಪುರುಷರು ಹೆಚ್ಚಾದ ದೊರೆತನವನ್ನು ಮಾಡಿದ್ದಾರೆ.

ಸ್ತ್ರೀಯ ಮೇಲೆ ಅಧಿಕಾರ ನಡೆಸುವಂತಹ ಕಾರ್ಯವು ದೇವರು ಇನ್ನೂ ಅನೇಕ ಶಿಕ್ಷೆಗಳನ್ನು ಆದಾಮ ಮತ್ತು ಹವ್ವಳಿಗೆ ನೀಡಿದ್ದಾನೆ ಎಂಬುದಕ್ಕೆ ಸೂಚನೆಯಾಗಿದೆ. ಒಂದು ವೇಳೆ ಈ ಶಿಕ್ಷೆಯು ಬದ್ಧವಾಗುವದಿಲ್ಲವಾದರೆ, ಆದರಿಂದ ಬಿಡುಗಡೆ ಉಂಟು. ಒಂದು ವೇಳೆ ದೇವರು ಇದನ್ನು ತೆಗೆಯದೆ ಹೋದರೆ ಅದು ಬದ್ಧವಾಗುತ್ತದೆ. ಸ್ತ್ರೀ ಪುರುಷರ ಸಂಬಂಧದಲ್ಲಿ ಪುರುಷನೇ ದೊರೆತನ ಮಾಡಬೇಕು ಎಂಬುದು ದೇವರ ಚಿತ್ತವೇ?

ಈ ವಿಷಯದಲ್ಲಿ ದೇವರ ಭಾವನೆಯನ್ನು ಅರಿಯುವುದು ಪ್ರಾಮುಖ್ಯವಾಗಿದೆ. ಯಾಕೆಂದರೆ ಏದೆನ್ ತೋಟದಲ್ಲಿ ನಡೆದ ಘಟನೆಯ ಮೂಲಕವಾಗಿ ಹೊಸ ಒಡಂಬಡಿಕೆಯು ಸ್ತ್ರೀಯ ಪಾತ್ರದ ಕುರಿತಾಗಿ ಸತ್ಯಬೋಧನೆಯನ್ನು ಮಾಡುತ್ತದೆ. ಆದಾಮ ಹವ್ವಳ ಪಾಪದ ಶಿಕ್ಷೆಯ ಕುರಿತಾದ ಅಪಾರ್ಥವು, ಬೈಬಲಿನ ಇನ್ನಿತರ ವಾಕ್ಯಗಳ ಕುರಿತಾಗಿಯು ಅಪಾರ್ಥಮಾಡುತ್ತದೆ. ನಮ್ಮ ಗೌರವವನ್ನು ಎತ್ತಿ ಹಿಡಿಯುವ ಬೋಧನೆಗಳೇ ನಮ್ಮ ಮುಖ್ಯ ಗುರಿಯಾಗಿರದೇ ಇವೆಲ್ಲದರಲ್ಲಿ ದೇವರ ಚಿತ್ತವನ್ನು ತಿಳಿದುಕೊಳ್ಳಬೇಕು.

ಒಂದು ಉಪದೇಶವನ್ನು ಅರಿತುಕೊಳ್ಳಲು ಅದು ಅಭ್ಯಾಸದಲ್ಲಿ ಹೇಗೆ ಅನ್ವಹಿಸಬಹುದು ಎಂಬ ಅವಶ್ಯಕತೆಯನ್ನು ತಿಳಿದುಕೊಂಡಿರಬೇಕು. ಏದೇನ್ ತೋಟದಲ್ಲಿ ಆದಾಮ ಮತ್ತು ಹವ್ವಳು ಪಾಪ ಮಾಡಿದ ನಂತರ ಯಾರು ನಾಯಕತ್ವವನ್ನು ಮಾಡಲು ಪ್ರಾರಂಭಿಸಿದರು? ಸಮಾಜದಲ್ಲಿ, ಮನೆಯಲ್ಲಿ, ಮತದಲ್ಲಿ, ಯಾರು ನಾಯಕರನ್ನಾಗಿರಲು ದೇವರು ಒಪ್ಪಿಕೊಂಡರು ಮೋಶೆಗೆ ನ್ಯಾಯಶಾಸ್ತ್ರವನ್ನು ಕೊಡುವ ಮುನ್ನ, ಧರ್ಮಶಾಸ್ತ್ರದಲ್ಲಿ ವಿವರಿಸಿದ ಪ್ರಕಾರ, ಮತ್ತು ಇಸ್ರಾಯೇಲ್ಯರ ವಾಗ್ದಾನ ಭೂಮಿಯೊಳಗೆ ಪ್ರವೇಶಿಸುವವರೆಗೆ ಸ್ತ್ರೀಯರ ಪಾತ್ರ ಏನಾಗಿತ್ತು.

## ನಿಭಂಧನೆಗಳನ್ನು ನೀಡುವ ಮೊದಲು ಇದ್ದ ಸ್ತ್ರೀ

ನಿಭಂಧನೆಗಳು ದೊರಕುವದಕ್ಕಿಂತ ಮೊದಲು ಇದ್ದ ಸ್ತ್ರೀಯರನ್ನು, ಬೈಬಲ ಕೆಳಮಟ್ಟದವರು ಎಂಬುದಾಗಿ ಪರಿಗಣಿಸುವದಿಲ್ಲ. ವಂಶಾವಳಿಗಳಲ್ಲಿ ಸ್ತ್ರೀಯರನ್ನು ಹೊರತು ಪಡಿಸಿ, ಪುರುಷರನ್ನೇ ಪ್ರಧಾನ ಮಾಡಿರುವರೆಂದು ಕೆಲವರು ತಿಳಿಯಬಹುದು. ಇದರಲ್ಲಿ ಹೆಂಡತಿಯರ ಮತ್ತು ಹೆಣ್ಣು ಮಕ್ಕಳ ಹೆಸರನ್ನು ನಮೂದಿಸದೆ, ಗಂಡು ಮಕ್ಕಳ ಹೆಸರನ್ನು ನಮೂದಿಸಿರುವರು (ಆದಿಕಾಂಡ 5:1-32; 10:1-32; 11:10-28) ಅಬ್ರೂಹಾಮ್ ಹಾಗೂ ನಾಹೋರನ ಹೆಂಡತಿಯರ ಕುರಿತು (ಆದಿಕಾಂಡ 11:29ರಲ್ಲಿ) ನೋಡುತ್ತೇವೆ.

ಅಬ್ರಹಾಮನ ವಿದೇಯತೆಯ ನಿಮಿತ್ತ ದೇವರು ಅವನೊಂದಿಗೆ ಒಡಂಬಡಿಕೆ ಮಾಡಿಕೊಂಡನು (ಆದಿಕಾಂಡ 22:16-18). ಸಾರಳ ಕುಟುಂಬದ ನಾಯಕತ್ವದ ನಿಮಿತ್ತ ದೇವರು ಇದನ್ನು ಮಾಡದೆ, ಅಬ್ರಹಾಮನ ನಿಮಿತ್ತ ಈ ಒಡಂಬಡಿಕೆಯನ್ನು ಅವನ ಸಂತತಿಗೆ ವಿಸ್ತರಿಸಿದನು (ಆದಿಕಾಂಡ 18:19). ಏಲಿಯ ಮಕ್ಕಳ ಪಾಪಕ್ಕೆ, ಅವರ ತಾಯಿಯನ್ನು ಹೊರತು ಪಡಿಸಿ, ಏಲಿಯನನ್ನೇ ಜವಾಬ್ದಾರಿ ಮಾಡಿದನು (1 ಸಮುವೇಲ 2:27-36; 3:13).

ಈ ಸಂದರ್ಭದಲ್ಲಿ ಪುರುಷರಿಗೆ ಹೆಚ್ಚು ಜವಾಬ್ದಾರಿಯನ್ನು ನೀಡಿದ್ದಾಗ್ಯೂ, ಬಯಂಕರವಾದ ನ್ಯಾಯ ತೀರ್ಪಿಗೆ ಅವರನ್ನೇ ಒಳಪಡಿಸಲಾಯಿತು ಅವರ ಶಿಕ್ಷೆಯು ಘೋರವಾಗಿತ್ತು.

ಸಾರಳ ಜೊತೆಗಿನ ಸಂಬಂಧದಲ್ಲಿ ಅಬ್ರಹಾಮನೇ ದೊರೆತನ ಮಾಡುವವನಾಗಿದ್ದನು. ದೇವರು ಅವನಿಗೆ ಕಾಣಿಸಿಕೊಂಡು ತನ್ನ ದೇಶವನ್ನು ಬಿಟ್ಟು ಹೋಗಲು ಸೂಚನೆಯನ್ನು ನೀಡಿದನು (ಆದಿಕಾಂಡ 12:1-3). ದೇವರು ಅವನೊಂದಿಗೆ ಮಾಡಿದ ಒಡಂಬಡಿಕೆಯು ಸುನ್ನತಿಯಿಂದ ಒಳಗೊಂಡಿತ್ತು, ಇದು ಪುರುಷರಿಗೆ ಮಾತ್ರ ಗುರುತಾಗಿತ್ತು (ಆದಿಕಾಂಡ 17). ದೇವರು ಇನ್ನೊಂದು ಒಡಂಬಡಿಕೆಯನ್ನು ಅಬ್ರಹಾಮನೊಂದಿಗೆ ಮಾಡಿಕೊಂಡು, ಅದನ್ನು ಅವನ ಗಂಡು ಮಕ್ಕಳಾದ ಇಸಾಕ, ಯಾಕೋಬ್ಯರ ಸಂತತಿಗೆ ಪುನರಾವರ್ತಿಸಿದನು: ದೇವರು ಅವರನ್ನು ಉನ್ನತ ಸ್ಥಿತಿಗೆ ತಂದು ಆಶೀರ್ವದಿಸುವೆನು, ಮತ್ತು ಅವರನ್ನು ದೊಡ್ಡ ಜನಾಂಗವನ್ನಾಗಿ ಮಾಡಿ, ಅವರ ಮೂಲಕವಾಗಿ ಎಲ್ಲಾ ಕುಟುಂಬಗಳನ್ನು ಆಶೀರ್ವದಿಸುವೆನು, ಮತ್ತು ಅವರಿಗೆ ಕಾನಾನ್ ದೇಶವನ್ನು ನೀಡುವೆನು ಎಂದು ದೇವರು ವಾಗ್ದಾನ ಮಾಡಿದನು (ಆದಿಕಾಂಡ 12:1-3; 17:8; 22:18; 26:3-5; 28: 13, 14).

ಬರಗಾಲದಲ್ಲಿ ಇಸ್ರಾಯೇಲ್ ಜನರನ್ನು ಪೋಷಿಸಲು, ದೇವರು ಯೋಸೇಫನನ್ನು ಉಪಯೋಗಿಸಿದನು (ಆದಿಕಾಂಡ 50:20). ಮೂಲ ಪಿತೃಗಳ ಕಾಲದಲ್ಲಿ ಸಾರಳು, ರೆಬೆಕ್ಕಳು, ರಾಹೇಲಳೂ, ಹಾಗೂ ಲೇಹಳು ಬಹು ಪ್ರಾಮುಖ್ಯ ಪಾತ್ರವನ್ನು ವಹಿಸಿದ್ದರು; ಆದರೆ ಕುಟುಂಬದ ಪ್ರತಿನಿದಿಗಳಾದ ಪುರುಷರನ್ನೇ ದೇವರು ಜವಾಬ್ದಾರಿ ಮಾಡಿದನೇ ವಿನಃ, ಸ್ತ್ರೀಯರನ್ನಲ್ಲ. ಇಸ್ರಾಯೇಲ್ಯರ ಹನ್ನೆರಡು ಕುಲಗಳು, ಯಾಕೋಬನ ಗಂಡು ಮಕ್ಕಳ ಮೇಲೆ ಅವಲಂಭಿತವಾಗುವುದೇ ವಿನಃ ಅವನ ಮಗಳಾದ, ದೀನಳ, ಮೇಲಾಗಲೀ ಇತರೆ ಸಂತತಿಯ ಮೇಲಾಗಲಿ ಅವಲಂಭಿಸಲಿಲ್ಲ. ದೊರೆತನದ ದಂಡವು ಇರುವಂತೆ ಯೂದನಿಗೆ, ವಾಗ್ದಾನವು ಮಾಡಲ್ಪಟ್ಟಿತು (ಆದಿಕಾಂಡ 49:10).

ಐಗುಪ್ತ ದೇಶದಿಂದ ಇಸ್ರಾಯೇಲ್ ಜನರನ್ನು ದಾಸತ್ವದ ಬಂಧನದಿಂದ ಬಿಡುಗಡೆ ಮಾಡಲು, ದೇವರು ಮೋಶೆ ಮತ್ತು ಆರೋನರನ್ನು ಆರಿಸಿಕೊಂಡನು (ವಿಮೋಚನಕಾಂಡ 7:1, 2), ಮತ್ತು ಅವರನ್ನು ಅರಣ್ಯಮಾರ್ಗದ ಮೂಲಕ ಮುನ್ನಡಿಸುವಂತೆ ಉಪಯೋಗಿಸಿದನು. ಮೋಶೆಯ ಮುಖಾಂತರ ದೇವರು ಧರ್ಮಶಾಸ್ತ್ರವನ್ನು ನೀಡಿದನು (ಯೋಹಾನ 1:17). ದೇವರ ಸ್ತ್ರೀಯರಾದಂತಹ ಮಿರಿಯಾಮ್, ಫರೋಹನ ಕುಮಾರ್ತೆ, ಹಾಗೂ ಮೋಶೆಯ ಹೆಂಡತಿ, ಚಿಪ್ಪೋರಳು, ಇವರೆಲ್ಲರಿಗೆ ಪ್ರಾಮುಖ್ಯವಾದ ಪಾತ್ರವನ್ನು ನೀಡಿದ್ದರೂ; ಮೋಶೆ, ಆರೋನ, ಯೆಹೋಶುವ, ಹಾಗೂ ಕಾಲೇಬರಿಗೆ, ನೀಡಿದ ನಾಯಕ ಸ್ಥಾನವನ್ನು ಸ್ತ್ರೀಯರಿಗೆ ನೀಡಲಿಲ್ಲ (ವಿಮೋಚನಕಾಂಡ 17:9), (ಅರಣ್ಯಕಾಂಡ 14:24), ಮತ್ತು ಎಪ್ಪತ್ತು ಜನ ಹಿರಿಯರಿಗೆ, ಮತ್ತು ಇತರೆ ಪುರುಷರಿಗೆ (ವಿಮೋಚನಕಾಂಡ 24:1; ಅರಣ್ಯಕಾಂಡ 11:16, 25), ಮಾತ್ರ ನಾಯಕತ್ವವನ್ನು ನೀಡಿದನು. ಹಾಗೂ ಎಲ್ದಾದನೂ ಮೇದಾದನೂ ಪ್ರವಾದಿಸಿದರು (ಅರಣ್ಯಕಾಂಡ 11:26). ಬೈಬಲಿನ ಬರವಣಿಗೆಗಳು, ದೇವರು ಪುರುಷರಿಗೆ ನೀಡಿದ ಪ್ರವಾದನೆಗಳಾಗಿವೆ. ಸ್ತ್ರೀಯರಲ್ಲಿ ಮಿರಿಯಮ್ ಹಾಗೂ ಹುಲ್ದಳು ಪ್ರವಾದಿಸಿದರು. ಅವರ ಪ್ರವಾದನೆಗಳು ಅಲ್ಪವಾಗಿದ್ದವು.

ಮಿರ್ಯಾಮಳು ಪ್ರವಾದಿನಿಯೆಂದು ಕರೆಯಲ್ಪಟ್ಟರು ಸಹ (ವಿಮೋಚನಕಾಂಡ 15:20ಎ), ಕೆಂಪು ಸಮುದ್ರವನ್ನು ದಾಟಿದ ಮೇಲೆ ಅವಳು ಸ್ತ್ರೀಯರನ್ನು ಸಂತೋಷಪಡಿಸುವಂತೆ ಅವಳ ಮಾತುಗಳ ದಾಖಲೆಯೂ ಇದ್ದವು (ವಿಮೋಚನಕಾಂಡ 15:20ಬಿ, 21), ಆದರೆ ಅವಳು ಪುರುಷರನ್ನು ನಡಿಸಿದಂತೆ ದಾಖಲೆಗಳೂ ಇಲ್ಲ. ಹುಲ್ದ ಎಂಬ ಪ್ರವಾದಿನಿಯೂ ತನ್ನ ಬಳಿಗೆ ಬಂದ ಪುರುಷರಿಗೆ ಖಾಸಗಿಯಾಗಿ ಪ್ರವಾದಿಸಿದಳು (2 ಅರಸುಗಳು 22:14-20). ಈ ಕಾಲದಲ್ಲಿ ದೇವರು ನಾಯಕತ್ವವನ್ನು ಮಾಡಲು ಇಸ್ರಾಯೇಲ್ಯರ ಪುರುಷರಿಗೆ ಮಾತ್ರ ಕೊಟ್ಟಿದ್ದರು.

## ನ್ಯಾಯ ಸ್ಥಾಪಕರುಗಳ ದಿವಸಗಳಲ್ಲಿ

ನ್ಯಾಯ ಸ್ಥಾಪಕರುಗಳ ದಿವಸಗಳಲ್ಲಿ ದೆಬೋರಳನ್ನು ಹೊರತು ಪಡಿಸಿ, ಪುರುಷರು ರಾಷ್ಟ್ರೀಯ ನಾಯಕರುಗಳಾಗಿದ್ದರು. ಆಕೆ, ಪ್ರವಾದಿನಿಯಾಗಿದ್ದು, ಸ್ತ್ರೀಯರ ನಾಯಕತ್ವಕ್ಕೆ ಮಾದರಿಯಾಗಿದ್ದಾಳೆ. ಅವಳು ಪ್ರವಾದಿನಿಯಾಗಿದ್ದು, ಇಸ್ರಾಯೇಲ್ಯರನ್ನು ಆಳಿದಳು ಎಂಬ ವಿಷಯದಲ್ಲಿ ಸಂದೇಹವಿಲ್ಲ (ನ್ಯಾಯಸ್ಥಾಪಕ 4:4, 5). ಆದರೆ ಅವಳು ಧಾರ್ಮಿಕ ವಿಷಯಗಳಲ್ಲಿ, ದೇವ ಜನರನ್ನು ಆಳಲಿಲ್ಲ ಎಂಬುದನ್ನು ನಾವು ತಿಳಿದು ಕೊಳ್ಳುತ್ತೇವೆ. ಲೇವಿಯ ಕುಲದ ಪುರುಷರಿಗೆ ಮಾತ್ರ ಧರ್ಮಶಾಸ್ತ್ರದ ಈ ನಿಯಮ ನೀಡಲಾಗಿತ್ತು (ಅರಣ್ಯ 1:50; 3:9, 10).

ದೇಬೋರಳ ನಿಮಿತ್ತ ಉದ್ಭವಿಸುವ ಪ್ರಶ್ನೆಗೆ ಬೈಬಲಿನಲ್ಲಿ ಉತ್ತರಗಳಿಲ್ಲ. ಜನರು ಈ ಕಾರ್ಯಕ್ಷೇತ್ರಕ್ಕೆ ಅವಳನ್ನು ನೇಮಿಸಿಕೊಂಡಿದ್ದರೋ? ಇಸ್ರಾಯೇಲ್ಯರ ಅರಸರನ್ನು, ದೇವರು ಪೂರ್ಣ ಆಶೀರ್ವಾದದಿಂದ ನೇಮಕಮಾಡಿದಂತೆ, ನ್ಯಾಯಸ್ಥಾಕರುಗಳನ್ನು, ನೇಮಕ ಮಾಡಿದ್ದನೋ (ಹೋಶೆಯ 13:11)? ಪುರುಷರು ತಮ್ಮ ನಾಯಕತ್ವದ ಪಾತ್ರವನ್ನು ಸರಿಯಾಗಿ ನಿರ್ವಹಿಸದೆ ಇದ್ದದ್ದರಿಂದ, ದೆಬೋರಳು ಆ ಪಾತ್ರವನ್ನು ನಿರ್ವಹಿಸಬೇಕಾಯಿತೇ? ಈ ಹಿಂದೆ ಇಸ್ರಾಯೇಲ್ ಜನರಲ್ಲಿ ಉದ್ಭವಿಸಿದ್ಧ, ಹಾಗೂ ನಂತರ ಉದ್ಭವಿಸಬಹುದಾಗಿದ್ದ, ಪರಿಸ್ಥಿತಿಯ ನಿಮಿತ್ತ ದೇವರು ದೆಬೋರಳನ್ನು ನ್ಯಾಯ ಸ್ಥಾಪಕಳನ್ನಾಗಿ ನೇಮಿಸಿದ್ಧನೋ? “ನನ್ನ ಜನರನ್ನೋ ಬಾಧಿಸುವವರು ಹುಡುಗರು, ಆಳುವವರು ಹೆಂಗಸರು” (ಯೆಶಾಯ 3:12).

ದೆಬೋರಳು ಪ್ರವಾದಿಸಿದ, ಪರಿಸ್ಥಿತಿಯ ಕುರಿತಾಗಿ ಯಾವುದೇ ವಿಷಯಗಳು ಪ್ರಕಟಗೊಂಡಿರುವದಿಲ್ಲ. ಅವಳು ದೇವ ಸಭೆಗೆ ಬೋಧಿಸಿದಳೋ ಅಥವಾ ದೇವ ಜನರ ಚಿಕ್ಕ ಗುಂಪಿನ ಜೊತೆಯಲ್ಲಿ ಖಾಸಗಿಯಾಗಿ ಮಾತ್ರ ಮಾತನಾಡಿದಳೋ? ಅಥವಾ ಅವಳು ಪುರುಷನಿಗೆ ಮಾತ್ರ ಪ್ರವಾದಿಸಿದಳೋ? ಅಥವಾ ಸ್ತ್ರೀಯರಿಗೆ ಮಾತ್ರ ಪ್ರವಾದಿಸಿದಳೋ? ಇತರರು ಓದಿ ತಿಳುಕೊಳ್ಳುವಂತೆ ಪ್ರವಾದನೆಗಳನ್ನು ಬರೆದಳೋ? ಅಥವಾ ವಯಕ್ತಿಕವಾಗಿಯೂ, ಮತ್ತು ಸಮೂಹದೊಂದಿಗೆ ಮಾತನಾಡಿ ಪ್ರವಾದಿಸಿದಳೋ? ಅವಳ ಪ್ರವಾದನೆ, ಧಾರ್ಮಿಕವಾಗಿತ್ತೋ? ಅಥವಾ ಪೌರನೀತಿಯ ಕುರಿತಾಗಿ ಇತ್ತೋ? ನಮಗೆ ತಿಳಿದಿರುವದಿಲ್ಲ. ಈ ಕಾರಣದಿಂದ ದೆಬೋರಳು ನ್ಯಾಯಸ್ಥಾಪಕಳಾಗಿಯೂ, ಪ್ರವಾದಿನಿಯಾಗಿಯೂ ಇರುವ ಕುರಿತು ಇರುವ ಸಂಗತಿಗಳ ಆದಾರದಿಂದ ಸ್ತ್ರೀಯರ ನಾಯಕತ್ವದ ಪಾತ್ರದ ಬಗ್ಗೆ ವಿಚಾರಗಳನ್ನು ಕಟ್ಟಬಾರದು ಎಂದು ಎಚ್ಚರವುಳ್ಳವರಾಗಿರಬೇಕು. ಇಸ್ರಾಯೇಲ್ಯರು ಅರಸರನ್ನು ಬಯಸಿದ ಕಾರಣದಂತೆ, ದೇವರು ಪ್ರವಾದಿನಿಯಾದ ದೆಬೋರಳನ್ನೂ ಸಹ ನೇಮಿಸಿರಬಹುದು. ಪ್ರವಾದಿನಿಯಾಗಿ ಸಾರ್ವಜನಿಕರೊಂದಿಗಾಗಲೀ, ಅಥವಾ ಧಾರ್ಮಿಕ ದೇವ ಜನರ ಬಳಿಯಲ್ಲಾಗಲಿ ಆಕೆ ಮಾತನಾಡಿರಲಾರಳು. ನಾಯಕತ್ವವನ್ನಾಗಲೀ, ಅವರಿಗೆ ನೀಡದೆ ಇರುವಾಗ, ಅವರು ಮಹತ್ವದ ಕಾರ್ಯಗಳನ್ನು ಮಾಡಿದರು ಮತ್ತು ದೀನ ಸ್ವಭಾವದಿಂದ ಸೇವೆ ಮಾಡಿದರು.

ಇದೇ ಸಮಯದಲ್ಲಿ ಬೈಬಲಿನಲ್ಲಿ ಪ್ರಸಿದ್ಧಿಯಾಗಿದ್ದ ಸ್ತ್ರೀಯರಾದ: ರಹಾಬಳು ಸಂಸೋನ ತಾಯಿ, ನವೋಮಿ, ರೂತಳು ಹಾಗೂ ಹನ್ನಳು ಜೀವಿಸಿದ್ದರು. ಇವರ್ಯಾರಿಗೂ ದೆಬೋರಳಂತೆ ನಾಯಕತ್ವದ ಪಾತ್ರವನ್ನು ನೀಡಿರಲಿಲ್ಲ, ಮತ್ತು ಯೆಹೋಶುವ ತನ್ನ ಕುಟುಂಬದ ಕುರಿತಾಗಿ ಮಾತನಾಡಿದಂತೆ, ಈ ಸ್ತ್ರೀಯರ್ಯಾರು ಮಾತನಾಡಲಿಲ್ಲ (ಯೆಹೋಶುವ 24:15). ಇಸ್ರಾಯೇಲ್ಯರ ಅವನತಿಯ ಕಾಲದಲ್ಲಿ, ನಾಯಕತ್ವದ ಪಾತ್ರವನ್ನು ವಹಿಸಲು ಯೋಗ್ಯ ಪುರುಷರು ಇಲ್ಲದೆ ಇದ್ದ ಪರಿಸ್ಥಿತಿಯಲ್ಲಿಯೂ ಸ್ತ್ರಿಯರು ನಾಯಕತ್ವದ ಪಾತ್ರವನ್ನು ವಹಿಸಿದ ಕುರಿತಾಗಿ ದೇವರ ವಾಕ್ಯದಲ್ಲಿ ಎಲ್ಲಿಯೂ ದಾಖಲಾತಿಗಳಿರುವದಿಲ್ಲ.

**ಅರಸರ ದಿವಸಗಳಲ್ಲಿ**

ದೇವರು ಕೇವಲ ಪುರುಷರನ್ನು ಮಾತ್ರ, ಇಸ್ರಾಯೇಲ್ಯರಿಗೆ ಅರಸರನ್ನಾಗಿ ನೇಮಿಸಿದ ವಿಚಾರವನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಾಗುವದಿಲ್ಲ (1 ಪೂರ್ವಕಾಲವೃತ್ತಾಂತ 23-27)ರಲ್ಲಿ ದಾವೀದನ ಸಮಾಜದಲ್ಲಿ ಇಸ್ರಾಯೇಲ್ಯರನ್ನು ಆಳಿದ ಸೈನ್ಯಾಧಿಕಾರಿಗಳು, ಧಾರ್ಮಿಕ ಹಾಗೂ ಪೌರ ನಾಯಕರುಗಳು ಪುರುಷರೇ ಆಗಿದ್ದರು. ಈ ವಿಷಯಗಳನ್ನು ಸಂಪೂರ್ಣವಾಗಿ ಸಂಸ್ಕೃತಿಗೆ ಒಪ್ಪಿಸಬಹುದು, ಒಂದು ವೇಳೆ ದೇವರು ಮಾಡುವ ಆಯ್ಕೆಗೆ ಇದನ್ನು ಮಿತಿಗೊಳಿಸಬಹುದು. ಒಂದು ವೇಳೆ ಇದು ದೇವರ ಉದ್ದೇಶಕ್ಕೆ ಅನುಗುಣವಾಗಿದ್ದರೆ, ದೇವರು ಸ್ತ್ರೀಯರನ್ನು ನಾಯಕತ್ವದ ಪಾತ್ರಕ್ಕೆ ನೇಮಕ ಮಾಡಬಹುದಿತ್ತು. ಅಥವಾ ಪ್ರವಾದಿಯಾಗಿದ್ದ ದಾವೀದನಿಗೆ ದೇವರು ಈ ಕಾರ್ಯಬಾರವನ್ನು ನೀಡಬಹುದಿತ್ತು. ದೇವರಿಂದ ಸರ್ವಜ್ಞಾನವನ್ನು ಪಡೆದಿದ್ದ ಸೊಲೋಮೋನನು ಸಹ ತನ್ನ ಒಡ್ಡೋಲಗದಲ್ಲಿ ಪುರುಷರನ್ನೇ ನೇಮಿಸಿದನು (1 ಅರಸು 4:1-19).

ಹಾಗೂ ದುಷ್ಟ ಸ್ತ್ರೀಯರ ಆಡಳಿತ ಕುರಿತಾಗಿಯೂ ನಾವು ಓದುವವರಾಗಿದ್ದೇವೆ. ಈಜೆಬೆಲಳು ಸಹ ನಾಬೋತನ ದ್ರಾಕ್ಷೇ ತೋಟವನ್ನು ಪಡೆಯಬೇಕೆಂಬ ಉದ್ದೇಶದಿಂದ, ನಾಬೋತನ ಮರಣಕ್ಕಾಗಿ ಅರಸನಾದ ಆಹಾಬನ ರಾಜ ಮುದ್ರೆಯನ್ನು ಉಪಯೋಗಿಸಿದ್ದಳು (1 ಅರಸು 21:7-10). ಅಹಜ್ಯನು ಮರಣಹೊಂದಿದನೆಂಬದನ್ನು ಅವನ ತಾಯಿಯಾದ ಅತಲ್ಯಳು ಕೇಳಿದಾಗ, ಫಕ್ಕನೆ ರಾಜ ಸಂತಾನದವರನ್ನೆಲ್ಲಾ ಸಂಹರಿಸಿಬಿಟ್ಟಳು (2 ಅರಸು 11:1-3).

## ಮುಕ್ತಾಯ

ಹಳೇ ಒಡಂಬಡಿಕೆಯಲ್ಲಿ, ಸ್ತ್ರೀಯರು ಪುರುಷರಿಗಿಂತಲೂ ಹೆಚ್ಚಾದ ಜ್ಞಾನವುಳ್ಳವರೂ, ವಿವೇಕಿಗಳೂ, ಗೌರವ ಹಾಗೂ ಧೈರ್ಯವುಳ್ಳವರಾಗಿದ್ದರು. (ಕೆಲವು ಪರಿಸ್ಥಿತಿಯಲ್ಲಿ ಮಾತ್ರ) ಅವರು ಸಾಮರ್ಥ್ಯದಲ್ಲಿ ಪುರುಷರಿಗಿಂತಲೂ ಕೆಳಮಟ್ಟದವರಾಗಿರಲಿಲ್ಲ. ಸಾರ್ವಜನಿಕ ಆಡಳಿತವನ್ನಾಗಲೀ, ಧಾರ್ಮಿಕ ಮೋಶೆಯ ಧರ್ಮಶಾಸ್ತ್ರದಲ್ಲಿ ಪುರುಷರಿಗೆ ದೇವರು ನೀಡಿದ ಆಡಳಿತ ಪಾತ್ರವನ್ನು, ಅವರು ನಿರ್ವಹಿಸುವ ಕುರಿತಾಗಿ ನೋಡುತ್ತೇವೆ.

---

## ಮೋಶೆಯ ಧರ್ಮಶಾಸ್ತ್ರದಲ್ಲಿ ಸ್ತ್ರೀಯರಿಗೆ ನೀಡಿರುವ ಅವಕಾಶಗಳು

ಧಾರ್ಮಿಕ ಸೇವೆಗಾಗಿಯೂ (ಅರಣ್ಯಕಾಂಡ 1:20-50; 3:5-10, 14, 15), ಸೇನೆಯ ಕಾರ್ಯಕ್ಕಾಗಿಯೂ (ಅರಣ್ಯಕಾಂಡ 1:1-3) ಮತ್ತು ಯಾಜಕ ವೃತ್ತಿಗಾಗಿಯೂ, ಸ್ತ್ರೀಯರನ್ನು ಹೊರತುಪಡಿಸಿ, ಮೋಶೆಯು ಎರಡು ವಿವಿಧ ಗುಂಪಿನ ಜನರನ್ನು ಆರಿಸಿಕೊಂಡನು. ಇಸ್ರಾಯೇಲ್ಯರ ಚೊಚ್ಚಲಾದ ಗಂಡಸರನ್ನು ಲೆಕ್ಕ ಮಾಡಿ ದೇವರಿಗಾಗಿ ಆರಿಸಿಕೊಂಡನೇ ವಿನಃ ಇಸ್ರಾಯೇಲ್ಯರ ಪೌರತ್ವವನ್ನು ಹೊಂದಿದ್ದ ಚೋಚ್ಚಲು ಸ್ತ್ರೀಯರನ್ನಲ್ಲ (ಅರಣ್ಯಕಾಂಡ 3:40, 45; ವಿಮೋಚನಕಾಂಡ 13:12; 22:29).

ಇಸ್ರಾಯೇಲ್ಯರ ಪ್ರತಿಯೊಬ್ಬ ಗಂಡಸು ವರ್ಷಕ್ಕೆ ಮೂರು ಬಾರಿ ದೇವರ ಸನ್ನಿಧಿಯಲ್ಲಿ ಕಾಣಿಸಿಕೊಳ್ಳಬೇಕಿತ್ತು (ವಿಮೋಚನಕಾಂಡ 23:17) ಯಾಜಕ ವರ್ಗದ ಗಂಡಸರು ಮಾತ್ರ ಯಜ್ಞಾರ್ಪಿತವಾದ ಆಹಾರವನ್ನು ತಿನ್ನಬಹುದಿತ್ತು (ಯಾಜಕಕಾಂಡ 6:18, 29; 7:6).

ಸ್ತ್ರೀಯು ಗಂಡು ಮಗುವಿಗಿಂತಲೂ, ಹೆಣ್ಣು ಮಗುವಿಗೆ ಜನ್ಮ ನೀಡಿದಾಗ ಆಕೆಯು ತನ್ನನ್ನು ಶುದ್ಧಪಡಿಸಿಕೊಳ್ಳುವದಕ್ಕೆ ಹೆಚ್ಚು ಸಮಯವನ್ನು ನಿಗದಿ ಪಡಿಸಲಾಗಿತ್ತು (ಯಾಜಕಕಾಂಡ 12:1-8). ಸೆರೆಯಾಳುಗಳನ್ನಾಗಿ ತೆಗೆದು ಕೊಂಡು ಹೋದಾಗ ಕನ್ಯೆಯರನ್ನು ಹೊರತುಪಡಿಸಿ, ಎಲ್ಲಾ ಗಂಡು ಹೆಣ್ಣುಗಳನ್ನು ಸಂಹರಿಸಬೇಕಿತ್ತು (ಅರಣ್ಯಕಾಂಡ 31:17, 18).

ಕುಟುಂಬದ ಬಾಧ್ಯತೆಯು ಗಂಡು ಮಕ್ಕಳಿಗೆ ನೀಡಲಾಗಿತ್ತು, ಮತ್ತು ಚೊಚ್ಚಲ ಗಂಡಿಗೆ

ಇಮ್ಮಡಿಯಾದ ಭಾಧ್ಯತೆಯು ಮೀಸಲಿಡಲಾಗಿತ್ತು (ಧರ್ಮೋಪದೇಶಕಾಂಡ 21:16-17). ಗಂಡು ಮಕ್ಕಳ ಮೂಲಕ ಕುಟುಂಬದ ಹೆಸರು ಮತ್ತು ಪಿತ್ರಾರ್ಜಿತ ಬಾಧ್ಯತೆ ಉಳಿಸಿಕೊಳ್ಳುವರು. ಗಂಡನು ತೀರಿಹೋದರೇ ಆತನ ಹೆಂಡತಿಯೂ ಮರಣ ಹೊಂದಿದ ಗಂಡನ ಹೆಸರನ್ನು ಉಳಿಸಲು ಗಂಡನ ಸಹೋದರನನ್ನು ಆತಳು ಮದುವೇ ಆಗುವಳು (ಧರ್ಮೋಪದೇಶಕಾಂಡ 25:5-10). ಮಕ್ಕಳಿಲ್ಲದೆ ಮರಣ ಹೊಂದಿದ ಸ್ತ್ರೀಗೆ ಪುರುಷನು ಮನೆ ಕಟ್ಟುವ ಅವಶ್ಯವಿರಲಿಲ್ಲ. ಪುರುಷರಿಗೆ ಅನೇಕ ಹೆಂಡತಿಯರು ಇರುತ್ತಿದ್ದರು. ಸ್ತ್ರೀಯರು ಒಬ್ಬನಿಗಿಂತಲೂ ಹೆಚ್ಚು ಗಂಡಂದಿರನ್ನು ಹೊಂದಿರುವ ನಿದರ್ಶನಗಳಿಲ್ಲ.

ಸ್ತ್ರೀಯರು ಪುರುಷರ ವಸ್ತ್ರಗಳನ್ನು ಧರಿಸುವುದು, ಪುರುಷರು ಸ್ತ್ರೀಯರ ವಸ್ತ್ರಗಳನ್ನು ಧರಿಸುವುದು, ದೇವರ ದೃಷ್ಟಿಯಲ್ಲಿ ಏಕೆ "ಅಸಹ್ಯಕರ"ವಾಗಿತ್ತು ಎಂದು ತಿಳಿದು ಬರುವದಿಲ್ಲ (ಧರ್ಮೋಪದೇಶಕಾಂಡ 22:5). ಒಂದು ವೇಳೆ ದೇವರು ಅವರನ್ನು ವ್ಯತ್ಯಾಸವಾಗಿ ಉಂಟು ಮಾಡಿರುವದರಿಂದ, ಅವರು ವಿಭಿನ್ನವಾಗಿಯೇ ಕಾಣಿಸಿಕೊಳ್ಳಬೇಕು. ಮತ್ತು ಅವರ ಪಾತ್ರವನ್ನು ಅವರೇ ನಿರ್ವಹಿಸಬೇಕು, ಮತ್ತು ಅವರು ವಸ್ತ್ರಗಳನ್ನು ಬದಲಿಸಿಕೊಂಡು ತದ್ವಿರುದ್ಧವಾದ ಪಾತ್ರಗಳನ್ನು ಮಾಡಬಾರದು ಎಂಬ ವಿಚಾರಮಾಡ ಬಹುದು (1 ಕೊರಿಂಥ 6:9)ರಲ್ಲಿ ಈ ರೀತಿ ತದ್ವಿರುದ್ಧವಾದವರ ಕುರಿತು ಸ್ತ್ರೀ, ಪುರುಷನಂತೆಯೂ, ಪುರುಷನು ಸ್ತ್ರೀಯಂತೆಯೂ ಮಾಡಿಕೊಳ್ಳುವ ಸ್ವಭಾವವನ್ನು ದೇವರು ಅಸ್ಯಹ್ಯಿಸುವನು ಎಂದು ಹೇಳಲಾಗಿದೆ. ಅದು ಸ್ತ್ರೀ ಪುರುಷರು ವ್ಯತ್ಯಾಸಕರವಾಗಿಯೂ ಬೆಳೆಸುವ ಕೂದಲಿನ ವಿಚಾರವಾಗಿರುತ್ತದೆ. ಸ್ತ್ರಿಯು ಕೂದಲು ಬೆಳೆಸಿ ಕೊಂಡರೆ ಅದು ಅವಳಿಗೆ ಗೌರವವಾ ಗಿದೆಯೆಂದೂ ತಿಳಿಸಲಾಗಿದೆ (1 ಕೊರಿಂಥ 11:14, 15). ಮಾನವರು - ತೋರುವ ಬಾಹ್ಯ ವೇಷವು ಅವರವರಿಗೆ ನೇಮಿಸಿರುವ ಪಾತ್ರವನ್ನು ಸೂಚಿಸುತ್ತದೆ.

ಧರ್ಮಶಾಸ್ತ್ರದ ಪ್ರಕಾರ ಹರಕೆ ಹೊರುವ ಒಬ್ಬ ಪುರುಷನ ಕ್ರಯವು ಐವತ್ತು ರೂಪಾಯಿಗಳು ಮತ್ತು ಇಪ್ಪತ್ತು ವರ್ಷದಿಂದ ಅರವತ್ತು ವರ್ಷದ ಸ್ತ್ರೀಯರಿಗೆ ಮೂವತ್ತು ರೂಪಾಯಿಗಳ ಕ್ರಯವಾಗಿತ್ತು (ಯಾಜಕಕಾಂಡ 27:1-7).[1] ಬಡವರಾದವರಿಗೆ, ಯಾಜಕನು ನೇಮಿಸಿದ ಕ್ರಯವಾಗಿತ್ತು (ಯಾಜಕಕಾಂಡ 27:8). ಕ್ರಯ ಕಟ್ಟುವುದು ವಯಕ್ತಿಕ ಸಾಮರ್ಥ್ಯಕ್ಕಿಂತಲೂ, ವಯಕ್ತಿಕವಾಗಿ ಕ್ರಯನೀಡಲು ಹೆಚ್ಚು ಸಾಮರ್ಥ್ಯವುಳ್ಳವರ ಮೇಲೆ ಅವಲಂಭಿತವಾಗಿತ್ತು ದುಡಿಯುವವರಾದ ಪುರುಷರು ಸ್ತ್ರೀಯರಿಗಿಂತ ಹೆಚ್ಚು ನೀಡಲು ಸಾಧ್ಯವಿತ್ತು.

ಪುರುಷರು ತಾವು ಮಾಡಿದ ಹರಕೆಗಳನ್ನು ತೀರಿಸಲೇ ಬೇಕಿತ್ತು. ತಂದೆಯಾಗಲೀ ಗಂಡನಾಗಲೀ, ಮಗಳನ್ನು ಅಥವಾ ಹೆಂಡತಿಯನ್ನು ಹರಕೆ ಮಾಡಲು ನಿರಾಕರಿಸಿದರೆ ಆ ಹರಕೆಯು ಸನ್ನಿಹಿತವಾಗುತ್ತಿರಲಿಲ್ಲ. ಕುಟುಂಬದಲ್ಲಿ ಸ್ತ್ರೀಯರು ಮಾಡ ಬಹುದಾದ ಹರಕೆಗಳನ್ನು ನಿರಾಕರಿಸಲು, ಕುಟುಂಬದ ಪುರುಷರಿಗೆ ಅಧಿಕಾರವಿತ್ತು (ಅರಣ್ಯಕಾಂಡ 30:1-15). ಪುರುಷರು ಮಾಡಿದ ಹರಕೆಗಳ ವಿಷಯದಲ್ಲಿ ಈ ರೀತಿ ನಿರ್ಧಾರ ಮಾಡಲು, ಸ್ತ್ರೀಯರಿಗೆ ಯಾವ ಅಧಿಕಾರವೂ ಇರಲಿಲ್ಲ. ಪುನಃ ಇಲ್ಲಿ ಪುರುಷರ ನಾಯಕತ್ವದ ಕುರಿತು ಅಂಶವನ್ನು ನೋಡುತ್ತೇವೆ.

---

ಟಿಪ್ಪಣಿ

[1]ಐದರಿಂದ ಇಪ್ಪತ್ತು ವರ್ಷದ ಬಾಲಕರ ಕ್ರಯ ಇಪ್ಪತ್ತು ರೂಪಾಯಿಗಳು, ಬಾಲಕಿಯರ ಕ್ರಯ ಹತ್ತು ರೂಪಾಯಿಗಳು; ಒಂದು ತಿಂಗಳಿಂದ ಐದು ವರ್ಷದವರೆಗಿನ ಗಂಡಿಗೆ ಐದು ರೂಪಾಯಿಗಳು ಹೆಣ್ಣಿಗೆ ಮೂರು ರೂಪಾಯಿಗಳು ಅರವತ್ತು ದಾಟಿದ ಗಂಡಿಗೆ ಅದಿನೈದು ರೂಪಾಯಿಗಳು ಹೆಣ್ಣಿಗೆ ಹತ್ತು ರೂಪಾಯಿಗಳು.

## ಬೈಬಲಿನಲ್ಲಿರುವ ಪ್ರವಾದಿನಿಯರು

ಐದು ಜನ ಪ್ರವಾದಿನಿಯರ ಕುರಿತಾಗಿ ಬೈಬಲ್ ತಿಳಿಸುತ್ತದೆ. ಅವರಲ್ಲಿ ಹುಲ್ದಳು (2 ಅರಸು 22:14; 2 ಪೂರ್ವಕಾಲವೃತ್ತಾಂತ 34:22) ಮತ್ತು ಅನ್ನಳು ಇವರಿಬ್ಬರು (ಲೂಕ 2:36) ಸತ್ಯವಾದ ಪ್ರವಾದಿನಿಯಾಗಿದ್ದರು ಮತ್ತು ಪ್ರವಾದಿನಿಯಾದ ನೋಯೋದ್ಯಳು (ನೆಹೆ 6:14) ಮತ್ತು ಈಜೆಬೆಲಳು ಇವರಿಬ್ಬರೂ ಸುಳ್ಳು ಪ್ರವಾದಿನಿಯಾಗಿದ್ದರು (ಪ್ರಕಟನೆ 2:20). ಯೆಶಾಯನ ಹೆಂಡತಿಯ ಹೆಸರು ನಮೂದಾಗಿರುವದಿಲ್ಲ (ಯೆಶಾಯ 8:3). ಅಥವಾ ಫಿಲಿಪ್ಪನ ಹೆಣ್ಣು ಮಕ್ಕಳ ಹೆಸರುಗಳೂ ಇರುವದಿಲ್ಲ (ಅಪೊಸ್ತಲರಕೃತ್ಯಗಳು 21:9) ಇವರು ಆದಿ ಸಭೆಯ ಪ್ರಾರಂಭದಲ್ಲಿ ಪ್ರವಾದಿಸಿದ್ದರು.

ಅರಸರ ಪ್ರತಿನಿದಿಗಳೊಂದಿಗೆ, ಹುಲ್ದಳು ಖಾಸಗಿಯಾಗಿ ಸಮಾಲೋಚನೆಯನ್ನು ಮಾಡಿದ್ದಳು (2 ಅರಸು 22:14-20; 2 ಪೂರ್ವಕಾಲವೃತ್ತಾಂತ 34:22-28) ಆದರೆ ಅವಳು ಆತ್ಮೀಕ ವಿಷಯಗಳಲ್ಲಿ ನಾಯಕತ್ವವನ್ನು ತೆಗೆದುಕೊಂಡು ದೇವಜನರೊಂದಿಗೆ ಸಂಭಾಷಣೆ ಮಾಡಿದಳು ಎಂದು ಎಲ್ಲಿಯು ದಾಖಲಾಗಿರುವದಿಲ್ಲ.

ಅನ್ನಳು ದೇವಾಲಯದಲ್ಲಿಯೇ ಮುಂದುವರೆದಿದ್ದಳು. ಮಗುವಾದ ಯೇಸುವನ್ನು ನೋಡಿದಾಗ, "ಯೆರುಸಲೇಮಿನ ಬಿಡುಗಡೆಯನ್ನು ಹಾರೈಸುತ್ತಿದ್ದವರೆಲ್ಲರ ಸಂಗಡ ಆತನ ವಿಷಯವಾಗಿ ಮಾತಾಡುವವಳಾದಳು" (ಲೂಕ 2:38ಬಿ). ಅವಳು ಎಷ್ಟು ಉದ್ದದ ಪ್ರವಾದನೆ ಮಾಡಿದಳು, ಅವಳು ದೇವಲಾಯದಲ್ಲಿ ಎಲ್ಲಿರುತ್ತಿದ್ದಳು, ಅಥವಾ ಅವಳು ದೊಡ್ಡ ಗುಂಪಿಗಾಗಲಿ ಅಥವಾ ವಯಕ್ತಿಕ ಜನರಲ್ಲಿ ಯಾವ ರೀತಿ ಪ್ರವಾದಿಸಿದಳು ಎಂದು ತಿಳಿದಿರುವದಿಲ್ಲ. ಸ್ತ್ರೀಯರು ಸ್ತ್ರಿಯರ ಅಂಗಳಕ್ಕೆ ಹೋಗಬಹುದೇ ವಿನಃ, ಶುದ್ಧರಾಗಿರುವ ಇಸ್ರಾಯೇಲಿನ ಪುರುಷರಿಗೆ ಮೀಸಲಿಟ್ಟಿರುವ ದೇವಾಲಯದ ಪ್ರವೇಶವು ಸ್ತ್ರೀಯರಿಗೆ ನಿಷೇದವಾಗಿತ್ತು. ಅನ್ನಳು ನಿಯಮಿತವಾಗಿ ಪ್ರವಾದಿಸಿದಳು, ಆದರೆ ಮೆಸ್ಸೀಯನ ಜನನದ ವಾರ್ತೆಯ ಹೊರತಾಗಿ, ಅವಳು ಅಲ್ಲಿ ಹಾದುಹೋಗುವ ಇನ್ನೇನನ್ನೂ ಹೇಳಲಿಲ್ಲ ಎಂದು ತಿಳಿಯುತ್ತೇವೆ.

ಅವಳು ಯಾವುದೇ ವಿಧದಲ್ಲು ಸಮೂದಾಯಕ್ಕೆ ಪ್ರವಾದಿಸಲಿಲ್ಲ ಮತ್ತು ಅದನ್ನು ದೇವಾಲಯದ ಪಾತ್ರವನ್ನಾಗಿ ಮಾಡಲಿಲ್ಲ, ಎಂಬ ರುಜುವಾತನ್ನು ಇಲ್ಲಿ ಕಾಣುತ್ತೇವೆ. ಯೆಶಾಯನ ಹೆಂಡತಿಯು ಏನು ಮಾಡಿದಳು ಎಂಬ ಮಾಹಿತಿಯು ದೊರಕುವದಿಲ್ಲ, ಅವಳು ಒಬ್ಬ ಪ್ರವಾದಿಯ ಹೆಂಡತಿಯಾಗಿದ್ದರಿಂದ, ಅವಳನ್ನು ಪ್ರವಾದಿನಿ ಎಂದು ಕರೆದಿರಬಹುದು, ಅಥವಾ ಅವಳು ಸಹ ಪ್ರವಾದನೆ ಮಾಡಿರಬಹುದು. ಒಂದು ವೇಳೆ ಅವಳು ಪ್ರವಾದಿಸಿದ್ದರೆ, ಎಲ್ಲಿ ಹೇಗೆ ಯಾವ ಮತ್ತು ಯಾರಿಗೆ ಎಂಬ ಮಾಹಿತಿಯು ಲಭ್ಯವಿರುವದಿಲ್ಲ. ಫಿಲಿಪ್ಪಿಯ ಕುರಿತಾಗಿಯೂ ಇದೇ ಆಲೋಚನೆಯಾಗಿರುತ್ತದೆ.

ಪ್ರವಾದಿನಿಯಾದ ಹುಲ್ದಳು ಮತ್ತು ಮಿರ್ಯಾಮಳ ಪ್ರವಾದನೆಗಳನ್ನು ಮಾತ್ರ, ವಾಕ್ಯದಲ್ಲಿ ದಾಖಲಿಸಲಾಗಿದೆ (2 ಅರಸು 22:14-22) ಮತ್ತು (ವಿಮೋಚನಕಾಂಡ 15:20, 21) ಪುರುಷರು ಹಾಗೂ ಸ್ತ್ರೀಯರು ಇರುವ ಸಾರ್ವಜನಿಕ ಸಭೆಗಾಗಿ ಇವರ ಪ್ರವಾದನೆಗಳು ಸೀಮಿತವಾಗಿರಲಿಲ್ಲ. ಯಾವುದೇ ಸ್ತ್ರೀಯು ಪ್ರವಾದನೆಗಳನ್ನು ಬರೆದಿರುವ ನಿದರ್ಶನಗಳಿಲ್ಲ. ಸ್ತ್ರೀ ಪುರುಷರು ಒಟ್ಟಾಗಿ ಸೇರಿ ಬರುವ ಸಭೆಗಳಲ್ಲಿ ಅಂದರೆ ಅದು ಸಾರ್ವಜನಿಕವಾಗಿರಲೀ, ಖಾಸಗಿಯಾಗಿರಲೀ, ಧಾರ್ಮಿಕವಾಗಿರಲೀ, ಪ್ರವಾದಿನಿಯರು ಅವರನ್ನು ಕುರಿತು ಪ್ರವಾದಿಸಿದರೂ ಎಂದು ಹಳೆ ಒಡಂಬಡಿಕೆಯಲ್ಲಾಗಲೀ, ಹೊಸ ಒಡಂಬಡಿಕೆಯಲ್ಲಾಗಲೀ, ದಾಖಲಾಗಿರುವದಿಲ್ಲ, ಆದರೆ ಸಭೆಯನ್ನು ಉದ್ದೇಶಿಸಿ ಮಾತನಾಡಲೂ, ಮತ್ತು ಪರಿಶುದ್ಧ ಗ್ರಂಥಗಳನ್ನು ಬರೆಯಲೂ ದೇವರು ಪುರುಷರನ್ನೇ ಉಪಯೋಗಿಸಿದನು.